### ಸೆಲೆಬ್ರಿಟಿಗಳ ಅನುಕರಣೆ

ಸೆಲೆಬ್ರಿಟಿಗಳು, ಮಾಡೆಲ್‌ಗಳು ಯಾವಾಗಲೂ ತಾವು ಹೋಗುವ ಸಭೆ ಸಮಾರಂಭಕ್ಕೆ ವಿಶೇಷ ವಸ್ತ್ರವಿನ್ಯಾಸದ ಉಡುಪುಗಳನ್ನು ಧರಿಸುವುದು ಸಾಮಾನ್ಯ. ಇತ್ತೀಚೆಗೆ ಕೆಲ ಬಾಲಿವುಡ್ ನಟಿಯರು ಈ ತರಹದ ಪಾಕೆಟ್ ಸೀರೆಗಳನ್ನು ಧರಿಸಿ ಇನ್‌ಸ್ಟಾದಲ್ಲಿ ಅಪ್‌ಲೋಡ್ ಮಾಡಿದಾಗ ಒಮ್ಮಿಂದೊಮ್ಮೆಲೆ ಈ ತರಹದ ಸೀರೆಗಳ ಕ್ರೇಜ್ ಯುವತಿಯರಲ್ಲಿ ಹೆಚ್ಚಾಗಿದೆ. ಅವರೂ ಇದೇ ತರಹದ ಸೀರೆಗಳನ್ನು ಧರಿಸಲು ಕಾತುರರಾಗಿದ್ದಾರೆ.

### ರೆಡಿ ಟು ವೇರ್

ಸಾಮಾನ್ಯವಾಗಿ 'ರೆಡಿ ಟು ವೇರ್' ಸೀರೆಗಳು ಪಾಕೆಟ್ ಹೊಂದಿರುತ್ತವೆ. ಸೀರೆಯ ಅಂದ ಕೆಡದಂತೆ, ಇದರ ಬಾರ್ಡರ್ ಬಣ್ಣಕ್ಕೆ ಹೊಂದಿಕೆಯಾಗುವಂತಹ ಬಟ್ಟೆಗಳ ಜೇಬುಗಳನ್ನು ಸೀರೆಗಳಿಗೆ ವಿನ್ಯಾಸಗೊಳಿಸಬಹುದು. ಅದರಲ್ಲೂ ಇತ್ತೀಚೆಗೆ ಪ್ಯಾಚ್‌ವರ್ಕ್ ಜೇಬುಗಳು ಟ್ರೆಂಡಿಯಾಗಿವೆ. ಪಾಕೆಟ್ ಸೀರೆಗಳಲ್ಲಿ ಬೆಂಗಾಲಿ ಕಾಟನ್, ಬಾಗಲ್‌ಪುರಿ ಕಾಟನ್ ಬ್ಲೆಂಡ್, ಕಲಂಕಾರಿ ಸೀರೆಗಳು, ನಾರಾಯಣಪೇಟ್ ಪ್ಯೂರ್ ಕಾಟನ್ ಸೀರೆ, ಹ್ಯಾಂಡ್ ಬ್ಲಾಕ್ ಪ್ರಿಂಟ್ ಸೀರೆ, ಹ್ಯಾಂಡ್‌ಲೂಮ್ ಸೀರೆ, ಚಿಕನ್‌ಕಾರಿ ಕಾಟನ್ ಸೀರೆಗಳು... ಹೀಗೆ ಕಾಟನ್ ಸೀರೆಗಳ ಜೊತೆ ಹ್ಯಾಂಡ್‌ಮೇಡ್ ಟ್ರೆಡಿಷನಲ್ ಡಿಸೈನ್‌ನ ಜೇಬುಗಳು ಈಗ ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿವೆ.



'ರೆಡಿ ಟು ವೇರ್' ಸೀರೆಗಳ ಜೊತೆ ಬೆಲ್ಟ್ ವಿತ್ ಪಾಕೆಟ್ ಇಂದಿನ ಹಾಟ್ ಫೇವರೆಟ್ ಎಂದೇ ಹೇಳಬಹುದು. ಇದೀಗ ಫ್ಯಾಷನ್ ಟ್ರೆಂಡ್ ಬದಲಾದ ಹಿನ್ನೆಲೆಯಲ್ಲಿ ಕಾಟನ್ ಸೀರೆಗಳ ಅಂಚಿಗೆ ಮ್ಯಾಚ್ ಆಗುವ ಫ್ಲೋರಲ್ ಬ್ಲೌಸ್ ಧರಿಸುತ್ತಿರುವ ಮಹಿಳೆಯರು, ಅದೇ ಫ್ಲೋರಲ್ ಬ್ಲೌಸ್‌ನ ಉಳಿದಿರುವ ಪೀಸ್ ಬಟ್ಟೆಯಲ್ಲಿಯೇ ಸೀರೆಗೆ ಪಾಕೆಟ್ ವಿನ್ಯಾಸಗೊಳಿಸಿ ಫ್ಯಾಷನ್‌ಗೆ ಒಂದು ಹೊಸ ನಾಂದಿ ಹಾಡಿದ್ದಾರೆ.

ಹ್ಯಾಂಡ್‌ವರ್ಕ್, ಮಿರರ್‌ವರ್ಕ್, ಜರ್ದೋಸಿ ವರ್ಕ್... ಹೀಗೆ ವರ್ಕ್ ಮಾಡಿದ ಪೀಸ್ ಬಟ್ಟೆಗಳನ್ನು ಸೀರೆಗೆ ಪಾಕೆಟ್ ರೂಪದಲ್ಲಿ ಅಳವಡಿಸಿ ಸೀರೆಗೆ ಒಂದು ಹೊಸ ಲುಕ್ ನೀಡಿದ್ದಾರೆ. ಸೀರೆ ಉಡಲು ಬಯಸುವವರು ಈ ತರಹದ ಸೀರೆ ವಿತ್ ಪಾಕೆಟ್ ಅನ್ನು ಮಾಡಬಹುದು. ಇದರಿಂದ ಬ್ಯಾಗ್ ಅಥವಾ ಪರ್ಸ್‌ಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬಹುದು. ಹಾಗೇ ಚೆನ್ನಾಗಿರುವ ಬಟ್ಟೆ ಪೀಸ್‌ಗಳನ್ನು ವ್ಯರ್ಥವಾಗಿ ಹಾಳು ಮಾಡುವ ಬದಲು ಈ ರೀತಿ ಸೀರೆಗಳಲ್ಲಿ ಮರುಬಳಕೆ ಮಾಡಿ ಫ್ಯಾಷನ್‌ಗೆ ಒಂದು ಹೊಸ ರೂಪ ಕೊಡಬಹುದು. ಇದರಿಂದ ಸೀರೆಯೂ ಡಿಫರೆಂಟಾಗಿ ಹೊಸ ಲುಕ್ ಪಡೆಯುತ್ತದೆ.

ಮಾರುಕಟ್ಟೆಯಲ್ಲಿ ಈಗ ತರಹೇವಾರಿ ಸೀರೆಗಳು ಬಂದಿದ್ದು, ಅವುಗಳಲ್ಲಿ ಪ್ಯಾಚ್‌ವರ್ಕ್ ಸೀರೆಗಳು ಎಲ್ಲರ ಗಮನ ಸೆಳೆಯುತ್ತಿವೆ. ಈ ಸೀರೆಗಳ ಪಲ್ಲು ಹಾಗೂ ಬ್ಲೌಸ್‌ಗಳನ್ನು ಮ್ಯಾಚ್ ಮಾಡಲಾಗಿರುತ್ತದೆ. ಹಾಗೇ ಇದೇ ಬಟ್ಟೆಯಲ್ಲಿಯೇ ಸೀರೆಗೆ ಪಾಕೆಟ್ ಅಳವಡಿಸಲಾಗಿರುತ್ತದೆ. ಇದು ಇತ್ತೀಚಿನ ಹೊಸ ಟ್ರೆಂಡ್. ಇದೇ ತರಹದ ಪ್ಯಾಚ್‌ವರ್ಕ್ಸ್ ಇದೀಗ ಬರೀ ಕಾಟನ್ ಸೀರೆಗಳಲ್ಲಿ ಮಾತ್ರವಲ್ಲ ಜಾರ್ಜೆಟ್, ಟಸ್ಸರ್ ಸಿಲ್ಕ್, ಪ್ಯೂರ್ ಸಿಲ್ಕ್, ವೆಲ್ವೆಟ್ ಹಾಗೂ ಜರಿ ಸೀರೆಗಳ ಮೇಲೂ ಕೂಡ ಪ್ರಯೋಗ ಮಾಡಲಾಗುತ್ತಿದೆ.

### ಧೋತಿ ಸೀರೆ

ಧೋತಿ ಸೀರೆ ಈಗಿನ ಟ್ರೆಂಡ್. ಬಿಳಿ ಬಣ್ಣದ ಧೋತಿಗೆ ಚೆನ್ನದ ಪ್ರಿಂಟೆಂಡ್ ಜಾಕೆಟ್. ಅದಕ್ಕೆ ಹೊಂದುವ ಕುಚ್ಚು ಹೆಣೆದ ಸೀರೆ ಅಥವಾ ದುಪಟ್ಟಾವನ್ನು ಧರಿಸಬಹುದು. ಬೇಕೆಂದರೆ ಸೊಂಟದ ಪಟ್ಟಿಯಂಥ ಬೆಲ್ಟ್ ಹಾಕಿಕೊಳ್ಳಬಹುದು. ಇದು ನೋಡಲು ಆಕರ್ಷಕವಾಗಿ ಕಾಣುತ್ತದೆ. ಈಗೀಗ ರೇಷ್ಮೆ ಧೋತಿ, ರೇಷ್ಮೆ ಸೀರೆಗಳನ್ನು ಹೆಚ್ಚಾಗಿ ಮಹಿಳೆಯರು ಉಡುತ್ತಿದ್ದಾರೆ.

ಕಾಲಕ್ಕೆ ತಕ್ಕಂತೆ, ಫ್ಯಾಷನ್‌ಗೆ ಅನುಗುಣವಾಗಿ ಹೊಸ ಟ್ರೆಂಡ್‌ಗೆ ಆತುಕೊಂಡು ಮಹಿಳೆಯರು ಈಗೀಗ ಪಾಕೆಟ್ ಸೀರೆಯತ್ತ ಮೊರೆಹೋಗಿರುವುದು ಮಾತ್ರ ಸುಳ್ಳಲ್ಲ. ■



# ಬೊಮ್ಕಾಯಿ ಸೀರೆ ಸೊಬಗು

ಸೀರೆಯಲ್ಲಿ ನೂರಾರು ವೈವಿಧ್ಯ. ಸಂಪ್ರದಾಯಕ್ಕೆ, ಫ್ಯಾಷನ್‌ಗೆ, ನೃತ್ಯ ಪಟುಗಳಿಗೆ, ಆಧುನಿಕ ಮನೋಭಾವದ ಮಹಿಳೆಯರಿಗೆ, ಸೆಲೆಬ್ರಿಟಿಗಳಿಗೆ, ಸಿನಿಮಾ ತಾರೆಗಳಿಗೆ.. ಹೀಗೆ ಸಮಾಜದ ಎಲ್ಲ ಸ್ತರದ ಮಹಿಳೆಯರಿಗೆ ಸೂಕ್ತವಾಗುವಂಥ ಬೊಮ್ಕಾಯಿ ಸೀರೆಗಳು ಜನಪ್ರಿಯತೆಯ ಹಾದಿ ಹಿಡಿದಿದೆ. ಒಡಿಶಾ ಮೂಲದ ಈ ಸೀರೆ ದೇಶದಾದ್ಯಂತ ಮಹಿಳೆಯರನ್ನು ಸೆಳೆಯುತ್ತಿದೆ.

ಸಾಂಪ್ರದಾಯಿಕ ಆಧುನಿಕ ಮನೋಭಾವದ ಯುವತಿಯರಿಗೆ ಅಚ್ಚುಮೆಚ್ಚಾಗಿರುವ ಬೊಮ್ಕಾಯಿ ಸೀರೆಗಳು ಎಥ್ನಿಕ್ ಉಡುಪಿನಂತೆಯೂ ಶೋಭಿಸುತ್ತಿವೆ. ಈ ಸೀರೆಗಳು ಸಾಂಪ್ರದಾಯಿಕತೆಯನ್ನು ಮೀರದೆ ಆಧುನಿಕ ಟ್ರೆಂಡ್‌ನೊಂದಿಗೆ ರಾಜಿ ಮಾಡಿಕೊಳ್ಳದೆ ಎಲ್ಲರ ಮನಗೆಲ್ಲುತ್ತಿವೆ. ಈ ಉಡುಗೆಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಧರಿಸಬಹುದು. ಮದುವೆ ಮುಂಜಿಗಳಂಥ ಶುಭ ಸಮಾರಂಭಗಳಿಗೆ, ಫ್ರೆಂಡ್‌ಶಿಪ್ ಡೇ, ವ್ಯಾಲೆಂಟೇನ್ಸ್ ಡೇ, ಸ್ವಾತಂತ್ರ್ಯ ದಿನ, ಗಣರಾಜ್ಯ ದಿನಗಳಂತಹ ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲಿ, ಬೊಮ್ಕಾಯಿ ಸೀರೆ ಬೇರೆ ಸೀರೆಗಳಿಗಿಂತ ವಿಭಿನ್ನವಾಗಿ ಕಾಣುತ್ತವೆ. ಫ್ಯಾಷನ್‌ನಲ್ಲೂ ಮೇಲುಗೈ ಸಾಧಿಸುತ್ತಿದೆ.

ಈ ಸೀರೆಗಳಿಗೆ ವಯೋಮಾನದ ಹಂಗಿಲ್ಲ. ಪುಟ್ಟ ಹುಡುಗಿಯಿಂದ ಹಿಡಿದು ಮುದುಕಿಯರವರೆಗೆ ಎಲ್ಲರೂ ಆರಾಮವಾಗಿ ಉಟ್ಟುಕೊಳ್ಳಬಹುದು. ಹೀಗಾಗಿ ಇಂಥ ಸೀರೆಗಳು ಬಹು ಬೇಗ ಖ್ಯಾತಿ ಗಳಿಸಿವೆ. ಇದು ಸಂಪ್ರದಾಯದ ಮಿತಿಯೊಳಗೆ ಫ್ಯಾಷನ್‌ನ ಪರಿಧಿಯನ್ನೂ ಮುಟ್ಟುವ ಗುಣ ಹೊಂದಿರುವುದು ಈ ಬಗೆಯ ಉಡುಗೆ ಇಂದು ಹೆಚ್ಚು ಹೆಚ್ಚು ಜನಪ್ರಿಯಗೊಳ್ಳಲು ಕಾರಣ. ಮದುವೆ ಸಂದರ್ಭಗಳಲ್ಲೂ ಬಟ್ಟೆ, ಬಣ್ಣ, ಸ್ಟೈಲ್, ಗ್ಲಾಮರ್ ಮುಂತಾದವುಗಳ ಲೆಕ್ಕಾಚಾರದಿಂದ ಸೀರೆ ಕೊಳ್ಳುವ ಮಹಿಳೆಯರು ಹೆಚ್ಚು ಹೆಚ್ಚು ಒತ್ತು ಕೊಡುವುದು ಫ್ಯಾಷನ್‌ಗೇ ಆಗಿರುವುದರಿಂದ ಬೊಮ್ಕಾಯಿ ಸೀರೆಗಳು ಬೇಡಿಕೆ ಪಡೆದುಕೊಂಡಿವೆ.